ಅಧ್ಯಕ್ಷರು.—ಆ ಬಗ್ಗೆ ಒಂದು ಕಾಲಿಂಗ್ ಅಟೆಂಷನ್ ನೋಟೀಸ್ ಸಹ ಬಂದಿದೆ. ತಮ್ಮದನ್ನು ಸಹ ಸೇರಿಸಿ ಒಟ್ಟಿಗೆ ತೆಗೆದುಕೊಳ್ಳಲಾಗುತ್ತದೆ.

Shortage of Cement.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ಸೀಮೆಂಟ್ ಮೂಟೆಯ ಬೆಲೆ ಮೂಟೆ ಒಂದಕ್ಕೆ ೨೦ ರಿಂದ ೨೫ ರೂಪಾಯಿಗಳಿಗೆ ಏರಿದೆ. ಜನರಿಗೆ ಕೊಳ್ಳುವುದು ಕಷ್ಟವಾಗಿರುವುದರಿಂದ ನಮ್ಮ ರಾಜ್ಯದಿಂದ ಸೀಮೆಂಟ್ ಹೊರಗೆ ಹೋಗುವುದನ್ನು ತಪ್ಪಿಸಬೇಕು ಮತ್ತು ಕೊರತೆಯಿರುವ ಸೀಮೆಂಟನ್ನು ಬೇರೆ ರಾಜ್ಯಗಳಿಂದ ತರಿಸುವ ಏರ್ಪಾಡು ಮಾಡಿ ಧಾರಾಳವಾಗಿ ಸಿಗುವಂತೆ ಮಾಡಬೇಕು.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಶಾಖೆಯ ಮಂತ್ರಿಗಳು).—ನಾಳೆ ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

Ill-treatment to Lt. Col. Rajagopala.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಪೌರಾಡಳಿತ ಸಚಿವರಲ್ಲಿ ಒಂದು ವಿಷಯವನ್ನು ತಮ್ಮ ಅನುಮತಿ ಪಡೆದು ಕೇಳಬೇಕಾಗಿದೆ. ಏನೆಂದರೆ ಮೊನ್ನೆ ನಿವೃತ್ತ ಲಿಫ್ಟಿನೆಂಟ್ ಶ್ರೀ ಎಂ.ಎಸ್. ರಾಜಗೋಪಾಲ್ ಎಂಬುವರು ಮಂತ್ರಿಗಳನ್ನು ಹೊಡಲು ಪೋರ್ಟಿಕೋದಲ್ಲಿ ಹೋಗುತ್ತಿದ್ದಾಗ, ಪೌರಾಡಳಿತ ಸಚಿವರು ಅವರನ್ನು ಗೆಟ್-ಔಟ್ ಎಂದು ಗದರಿಸಿದರೆಂದು, ನಂತರ ಅಲ್ಲಿಯೇ ಇದ್ದ ಪೋಲೀಸ್ ದಫೇದಾರನನ್ನು ಕರೆಸಿ, ನೀನು ಇಲ್ಲಿ ಏನು ಕೆಲಸ ಮಾಡುತ್ತಿದ್ದೀಯಾ, ಈಡಿಯಟ್' ಎಂದು ಅವಾಚ್ಯ ಶಬ್ದಗಳಿಂದ ಗದರಿಸಿದರೆಂದು, ನಂತರ ಶ್ರೀ ರಾಜಗೋಪಾಲ್ ಅವರು ಈ ಸಂಬಂಧದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಪೋಲೀಸ್ ಕಮೀಷನರ್ ಅವರಿಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಂದು ನನಗೆ ತಿಳಿದುಬಂದಿದೆ. ಮತ್ತು ಆ ಸ್ಟೇಟ್‌ಮೆಂಟನ್ನು ಪೋಲೀಸ್ ಕಮೀಷನರ್ ಅವರು ರೆಕಾರ್ಡ್ ಮಾಡಿಕೊಂಡಿದ್ದಾರೆಂದು ಸಹ ತಿಳಿದುಬಂದಿದೆ. ಈ ತರಹದಲ್ಲಿ ಮಂತ್ರಿಗಳು ಸಾರ್ವಜನಿಕರ ಬಗ್ಗೆ ಅದರಲ್ಲಿಯೂ ಸಮಾಜ ಕಾರ್ಯಕರ್ತರಾದಂಥ ಲೆ: ಎಂ. ಎಸ್. ರಾಜಗೋಪಾಲ್ ಎಂಬುವರ ಬಗ್ಗೆ ನಡೆದುಕೊಂಡರೆ ಅವರ ಮನಸ್ಸಿನಲ್ಲಿ ಯಾವ ರೀತಿ ನೋವಾಗುತ್ತದೆ ಎಂಬುದನ್ನು ನಾವು ಊಹಿಸಬಹುದಾಗಿದೆ. ಇದರ ಸತ್ಯಾಂಶ ಏನು ಎಂಬ ಬಗ್ಗೆ ಮಾನ್ಯ ಮಂತ್ರಿಗಳಿಂದ ನಾನು ವಿವರಣೆ ಕೇಳಬಯಸುತ್ತೇನೆ.

ಅಧ್ಯಕ್ಷರು.—ಮಂತ್ರಿಗಳು ವಿವರಣೆ ಕೊಡುವುದಿದ್ದರೆ ಕೊಡಬಹುದು;

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಿದ್ದಪ್ಪನವರು ಆಡಿದ ಕನ್ನಡ ಭಾಷೆ ಬಯಲಾಟದ ಭಾಷೆ ಇದ್ದ ಹಾಗೆ ಕಾಣುತ್ತದೆ. ಅವರು ಹೇಳಿದಂಥ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮದು ಯಕ್ಷಗಾನ ಪ್ರಸಂಗವೋ ಅಥವಾ ಯಾವ ಪ್ರಸಂಗವೋ ನನಗೆ ಗೊತ್ತಾಗಲಿಲ್ಲ ?

ಶ್ರೀ ವಾಟಾಳ್ ನಾಗಾರಾಜ್.—ಅವರದ್ದು ಬಯಲಾಟದ ಪ್ರಸಂಗ.

ಅಧ್ಯಕ್ಷರು.—ನಿಮ್ಮದು ಕೋಲಾಟವೇ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಈ ಪ್ರಸಂಗ ನಡೆದಿದ್ದು ಗೊತ್ತಿಲ್ಲ ಎಂದು ಹೇಳುವುದಾದರೆ, ಮಾನ್ಯ ರಾಜಗೋಪಾಲ್ ಅವರು ಪೋಲೀಸ್ ಕಮೀಷನರ್ ಅವರಿಗೆ ಕೊಟ್ಟಿರುವ ಸ್ಟೇಟ್‌ಮೆಂಟ್ ಕಾಪಿ ನನ್ನ ಹತ್ತಿರ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

(Question of Privilage against the Chief Minister)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ನಾನು ೧೨೭ ನೇ ರೂಲ್ ಪ್ರಕಾರ ಒಂದು ಪ್ರಿವಿಲೇಜ್ ಮೋಷನ್ ನೋಟೀಸ್ ಕಳುಹಿಸಿದ್ದೆ. ನಾನು ಅದನ್ನು ಕಳುಹಿಸಿ ಬಹಳ ದಿವಸ ಆಯಿತು. ಆದರಲ್ಲಿರುವ ಅಂಶ ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳು ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ ಮಾತನಾಡುತ್ತಾ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಎಷ್ಟೇ ಹಣವನ್ನು ಖರ್ಚು ಮಾಡಿದರೂ ಅದಕ್ಕೆ ಕೇಂದ್ರ ಸರ್ಕಾರದವರು ಕೊಡುತ್ತಾರೆ ಎಂದು ಹೇಳಿದ್ದರು.